ಬರೆದಿದ್ದೇವೆ, ಸಂಬಂಧಪಟ್ಟ ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ಬರೆದಿದ್ದೇವೆ. ಎಲ್ಲ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ.

ಡಾ॥ ಎ.ಬಿ.ಮಲಕರೆಡ್ಡಿ :-ಇದು ಸರ್ಕಾರದ ಅಸಹಾಯಕತೆಯನ್ನು ತೋರಿಸುತ್ತದೆ. ಎಲ್ಲ ಸೌಲಭ್ಯಗಳೂ ಸರ್ಕಾರದ ಹಿಂದಿರುವಾಗ ಈ ವಿಳಂಬವಾಗಿದೆ.

ಛೇರ್ಮನ್:-ಇದು ಅಸಹಾಯಕತೆಯ ಪ್ರಶ್ನೆಯಲ್ಲ. ಇನ್‌ಫರ್ಮೇಷನ್ ಕಲೆಕ್ಟ್ ಮಾಡಬೇಕಾದ್ದರಿಂದ ಡಿಲೇ ಆಗಿದೆ.

ಶ್ರೀ ಜಿ.ಪುಟ್ಟಸ್ವಾಮಿಗೌಡ:- ಇದು ಸಮರ್ಪಣಾ ಭಾವದಿಂದ ಕೆಲಸ ಮಾಡಬೇಕೆಂಬ ಫಲ ಹೊತ್ತಂಥ ಸರ್ಕಾರ. ಸರ್ಕಾರಕ್ಕೆ ಅಸಹಾಯಕತೆ ಪ್ರಶ್ನೆ ಇಲ್ಲವೇ ಇಲ್ಲ. ಕಾಲಾವಕಾಶ ಬೇಕು ಎಂದು ಕೇಳಿದ್ದೇವೆ. ಆದಷ್ಟು ಬೇಗ ಅವರಿಗೆ ಉತ್ತರಗಳನ್ನು ಪತ್ರ ಮೂಲಕವಾಗಲೀ ಅಥವಾ ಸದನದ ಮುಂದೆ ಇಡುವುದಕ್ಕಾಗಲೀ ವ್ಯವಸ್ಥೆ ಮಾಡುತ್ತೇನೆ.

ಡಾ॥ ಎ.ಬಿ.ಮಲಕರೆಡ್ಡಿ:- 31ನೇ ತಾರೀಖಿಗೆ ಅಧಿವೇಶನ ಮುಗಿಯುತ್ತದೆ.

ಛೇರ್ಮನ್:-ಅಷ್ಟರೊಳಗೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಜಿ.ಪುಟ್ಟಸ್ವಾಮಿಗೌಡ:- 1985ನೇ ಇಸವಿಯಿಂದ ಖಾಸಗಿ ಮತ್ತು ಸರ್ಕಾರಿ ಡೆಂಟಲ್ ಕಾಲೇಜುಗಳಲ್ಲಿ ಸೀಟುಗಳನ್ನು ಯಾವ್ಯಾವ ಕಾಲೇಜಿನವರು ತೆಗೆದುಕೊಂಡಿದ್ದಾರೆ, ಯಾವ್ಯಾವ ರೀತಿಯಲ್ಲಿ ಅಡ್ಮಿಟ್ ಮಾಡಿಕೊಂಡಿದ್ದಾರೆ ಎಂದು ಅದರ ಸಂಪೂರ್ಣವಾದ ಮಾಹಿತಿ ಬೇಕೆಂದು ಕೇಳಿದ್ದಾರೆ. ಇವತ್ತು ನಾವು ಎಲ್ಲ ರೀತಿಯ ಪ್ರಯತ್ನ ಮಾಡಿದ್ದೇವೆ. ಕೊನೆಗೆ ಎಂಟು ವಿಶ್ವವಿದ್ಯಾನಿಲಯಗಳಿಗೆ ಪತ್ರ ಸಹ ಬರೆದಿದ್ದೇವೆ. ಈ ವ್ಯಾಪ್ತಿಯಲ್ಲಿ ಬರತಕ್ಕಂಥ ಖಾಸಗಿ ಕಾಲೇಜುಗಳವರು ಎಷ್ಟೆಷ್ಟು ಸೀಟುಗಳನ್ನು ತೆಗೆದುಕೊಂಡಿದ್ದಾರೆ ಎಂದು ಕೇಳಿದ್ದೇವೆ. ಈ ಮಾಹಿತಿಗಾಗಿ ನಾವು ತಗಾದೆ ಮಾಡುತ್ತಿದ್ದೇವೆ. ಆದಷ್ಟು ಬೇಗ ಉತ್ತರ ಕೊಡುವ ಪ್ರಯತ್ನ ನಾವು ಮಾಡುತ್ತೇವೆ.

ಶ್ರೀ ಕೆ.ಸಿದ್ದಯ್ಯ :- ಪ್ರಶ್ನೆ 406 (1508)ಗೆ ಉತ್ತರ ಕಳುಹಿಸಿ ಕೊಟ್ಟಿಲ್ಲ. ಎರಡನೇ ಸಾರಿಯೂ ಬಂದಿಲ್ಲ.

ಶ್ರೀ ಬಿ.ಶಿವಣ್ಣ:-ಹೆಚ್.ಯು.ಡಿ.ಇಲಾಖೆಯಿಂದ ನನಗೆ ಈಗ ಬಂದಿದೆ. ಮೊದಲು ಹೆಚ್.ಯು.ಡಿ.ಗೆ ಹೋಗಿ ನನಗೆ ಬಂದು ಎರಡು ದಿವಸ ಆಯಿತು. ಉತ್ತರ ಕೊಡುವುದಕ್ಕೆ ಟೈಮ್ ಆಗುತ್ತದೆ.

ಶ್ರೀ ಕೆ.ಸಿದ್ದಯ್ಯ :-ಎರಡನೇ ಸಾರಿಯೂ ಉತ್ತರ ಕೊಟ್ಟಿಲ್ಲ.

ಛೇರ್ಮನ್:-ಮಂತ್ರಿಗಳಿಗೆ ಎಷ್ಟು ಕಾಲ ಬೇಕು ?

ಒಬ್ಬರು ಮಾನ್ಯ ಸದಸ್ಯರು :- ಹೀಗಾದರೆ ನೀವು ಹೆಲ್ಡ್ ಓವರ್ ಪ್ರಶ್ನೆಗಳನ್ನು ಹಾಕಲೇ ಬೇಡಿ.

ಛೇರ್ಮನ್:- ರಿಪ್ಲೈ ಸಪ್ಲೈ ಮಾಡುತ್ತೀರಾ ಅಥವಾ ಕಳಿಸಿಕೊಡುತ್ತೀರಾ ?

ಶ್ರೀ ಬಿ.ಶಿವಣ್ಣ :-ಆಗಬಹುದು. ರಿಪ್ಲೈ ಸಪ್ಲೈ ಮಾಡುತ್ತೇನೆ.

ಶ್ರೀ ಬಿ.ಶಿವರಾಮು:-ಮಾನ್ಯ ಅಧ್ಯಕ್ಷರೇ, ನಮಗೆ ಉತ್ತರ ಬೇಕಿಲ್ಲ. ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಬೇಕು. ಉತ್ತರವನ್ನು ಬರವಣಿಗೆಯಲ್ಲಿ ಕಳಿಸಿ ಕೊಟ್ಟರೆ ಅದರಿಂದ ಪ್ರಯೋಜನ ಆಗುವುದಿಲ್ಲ.

ಛೇರ್ಮನ್:-ಇದು ಹೆಚ್.ಯು.ಡಿ.ಗೆ ಹೋಗಿ ವಾಪಸ್ಸು ಬಂದಿದೆ.

ಶ್ರೀ ಬಿ.ಶಿವರಾಮು :-ಪ್ರಶ್ನೆಗಳು ಇಲ್ಲಿ ಬರುವುದೇ ಲಾಟರಿಯಲ್ಲಿ. ಮೂರು ಮೂರು ಸಾರಿ ಕೇಳಿದರೂ ಉತ್ತರ ಕೊಡದಿದ್ದರೆ ಉಪಯೋಗ ಏನಾಗುತ್ತದೆ ? ಸದನದಲ್ಲಿ ಮಾತನಾಡುವುದಕ್ಕೆ ಅವಕಾಶ ಆಗುತ್ತದೆ ಎಂದು ನಾವು ಪ್ರಶ್ನೆ ಕೇಳುತ್ತೇವೆ.

ಛೇರ್ಮನ್:- ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳಬೇಕು. ಈ ಪ್ರಶ್ನೆ ಹೆಚ್.ಯು.ಡಿ.ಗೆ. ಹೋಗಿ,

ನಿನ್ನೆ ತಾನೆ ಅವರಿಗೆ ಬಂದಿದೆ, ಈಗ ಅವರು ಕಾಲಾವಕಾಶ ಕೇಳುತ್ತಿದ್ದಾರೆ.

ಶ್ರೀ ಬಿ.ಶಿವರಾಮು:- ನನ್ನದೂ ಒಂದು ಪ್ರಶ್ನೆ ಹೆಲ್ಡ್ ಓವರ್ ಆಗಿದೆ, 4 ಸಾರಿ ಬಂದಿಲ್ಲ, ಬಹಳ ಪ್ರಮುಖವಾದ ಪ್ರಶ್ನೆ. ರೈತರು ಸಾಲ ತೆಗೆದುಕೊಂಡು ಬಾವಿಗಳನ್ನು ತೋಡಿ, ಡ್ರೈ ಆಗಿ, ಒಣಗಿದ ಬಾವಿಗಳಿಗೆ 1987 ರಿಂದಲೂ ಸಾಲ ಮನ್ನಾ ಮಾಡಿಲ್ಲ. ನಾನು ಈ ಅಂಕಿ ಅಂಶಗಳನ್ನು ಕೇಳಿ ಒಂದು ಪ್ರಶ್ನೆ ಹಾಕಿದ್ದೇನೆ. 4 ಸಲ ಹೆಲ್ಡ್ ಓವರ್ ಆಯಿತು ಇದುವರೆಗೂ ಸರ್ಕಾರದಿಂದ ಉತ್ತರ ಬಂದಿಲ್ಲ. ಈ ರೀತಿ ಮಾಡುತ್ತಾ ಇದ್ದರೆ, ನಾವು ಏನು ಮಾಡಬೇಕು. ನಾವು ರೈತರಿಗೆ ನ್ಯಾಯ ಒದಗಿಸುವುದಕ್ಕಾಗುತ್ತದೆಯೇ ? ಮಾನ್ಯ ಸಚಿವರು ಆಸಕ್ತಿ ತೆಗೆದುಕೊಂಡು ಉತ್ತರ ಒದಗಿಸಿಕೊಡಬೇಕು. ಏಕೆಂದರೆ, ಆಯವ್ಯಯದಲ್ಲಿ ಇದಕ್ಕಾಗಿ ಹಣ ಒದಗಿಸಿಲ್ಲ. ನಾನು ಇದಕ್ಕೆ ಸಂಬಂಧಪಟ್ಟ ಇಲಾಖೆಗೆ ಹೋಗಿ ಬಂದಿದ್ದೇನೆ, ಅವರ ಹತ್ತಿರ ವಿಚಾರ ಇಲ್ಲ, ಅಂಕಿಅಂಶ ಇಲ್ಲ. ಇದರ ಬಗ್ಗೆ ಸರ್ಕಾರದವರು ಗಮನ ಹರಿಸದೇ, ತಾವು ನಮ್ಮನ್ನು ಕುಳಿತುಕೊಳ್ಳಿ ಎಂದು ಹೇಳಿದರೆ, ಕುಳಿತುಕೊಳ್ಳುತ್ತೇವೆ. ನಮಗೆ ಆಲ್ಟರ್‌ನೇಟಿವ್ ಉಳಿದಿರುವುದು ಅದು ಒಂದೇ. ಆದರೆ, ನಾವು ಜನತೆಗೆ ನ್ಯಾಯವನ್ನು ಒದಗಿಸಿಕೊಡುವುದಕ್ಕಾಗುವುದಿಲ್ಲ.

ಛೇರ್ಮನ್:-ಇಲ್ಲಿ ಉದ್ದೇಶಪೂರ್ವಕವಾಗಿ ಯಾವುದೂ ಆಗುವುದಿಲ್ಲ. ಕಾರಣಾಂತರದಿಂದ ಆಗುತ್ತದೆ., ಮುಂದೆ ಈ ರೀತಿ ಆಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಬೇಕು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ವಿಷಯ:-ಅಲೆಮಾರಿ ಜನಾಂಗದವರ ವಿಶೇಷ ಅಭಿವೃದ್ಧಿ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 461 (919)

ಶ್ರೀ ಎಸ್.ರುದ್ರಪ್ಪ (ತುರುವೇಕೆರೆ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.?

ಅ ಕೇಂದ್ರ ಸರ್ಕಾರದ ಮಾರ್ಗಸೂಚಿಯ ಮೇರೆಗೆ ಅಲೆಮಾರಿ ಜನಾಂಗದವರನ್ನು ಗುರುತಿಸಲಾಗುತ್ತಿದೆಯೇ;

ಆ ಸದರಿ ಜನಾಂಗದವರನ್ನು ಗುರುತಿಸಲು ನಿರ್ದೇಶಕರ ಕಛೇರಿಯ ಪತ್ರ ಸಂಖ್ಯೆ:ಬಿಸಿಎಂ:ಸಿಡಿಎನ್-1:ಸಿಆರ್-13:90-91ರ ಪ್ರಕಾರ ಸರ್ಕಾರದ ಆದೇಶ ಸಂಖ್ಯೆ :ಬಿಹೆಚ್‌ಎಸ್ 262ಎಸ್‌ಇಡಬ್ಲ್ಯೂ 65 ದಿನಾಂಕ 1-2-66ನೇ ಪ್ರಕಾರ ಅಲೆಮಾರಿ ಜನಾಂಗದವರ ಪಟ್ಟಿಯನ್ನು ಇಲಾಖಾ ಅಧಿಕಾರಿಗಳಿಗೆ ಕಳುಹಿಸಿಕೊಡಲಾಗಿದೆಯೇ?

ಇ ಹಾಗಿದ್ದಲ್ಲಿ ದಿನಾಂಕ: 1-2-66ರ ಸರ್ಕಾರಿ ಆದೇಶದ ಪ್ರಕಾರ ಅಲೆಮಾರಿ ಜನಾಂಗದವರ ಪಟ್ಟಿಯನ್ನು ಪ್ರಕಟಿಸಲಾಗಿದೆಯೇ, ಇಲ್ಲಿದಿದ್ದಲ್ಲಿ ಕಾರಣವೇನು, ಎಷ್ಟು ಸಮಯದಲ್ಲಿ ಪ್ರಕಟಿಸಲಾಗುವುದು.

ಈ ಅಲೆಮಾರಿ ಜನಾಂಗದವರ ಕ್ರಿಯಾ ಯೋಜನೆಯನ್ನು ರೂಪಿಸಿ ಕೇಂದ್ರಕ್ಕೆ ಕಳುಹಿಸಲು 2 ವರ್ಷಗಳಾದರೂ ಕಳುಹಿಸದಿರಲು ಕಾರಣವೇನು, ಎಷ್ಟು ಸಮಯದಲ್ಲಿ ಕಳುಹಿಸಲಾಗುವುದು.

ಉ ಗುರುತಿಸಲಾಗಿರುವ ಅಲೆಮಾರಿ ಜನಾಂಗದ ಜಾತಿ, ಗ್ರಾಮ, ತಾಲ್ಲೂಕು, ಜಿಲ್ಲೆಗಳ ವಿವರಗಳನ್ನು ನೀಡುವುದು.;

ಊ ಯೋಜನೆಗಳನ್ನು ಅನುಷ್ಠಾನ ಗೊಳಿಸಲು ಸರ್ಕಾರದಿಂದ ಮಾರ್ಗಸೂಚಿ ನೀಡಲ್ಲಾಗಿದೆಯೇ, ಹಾಗಿದ್ದಲ್ಲಿ ಸದರಿ ಪ್ರತಿಯನ್ನು ನೀಡುವುದು. ಇಲ್ಲದಿದ್ದಲ್ಲಿ ಎಷ್ಟು ಸಮಯದಲ್ಲಿ ಅದನ್ನು ಹೊರಡಿಸಲಾಗುವುದು?

ಶ್ರೀ ಬಿ.ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ ಕೇಂದ್ರ ಸರ್ಕಾರವು ಅಲೆಮಾರಿ, ಅರೆ ಅಲೆಮಾರಿ ವಿಮುಕ್ತಿ ಜಾತಿಗಳು ಹಾಗೂ ಗ್ರಾಮೀಣ ಕೈಗಾರಿಕೆಗಳ ಜನರ ಅಭಿವೃದ್ಧಿಗಾಗಿ ವಿಶೇಷ ಘಟಕ ಯೋಜನೆಯೊಂದನ್ನು ರೂಪಿಸಲು ಯೋಜಿಸಿದ್ದು